756(813) ಶ್ರಿ ಕೃಷ್ಣಾ ಪಾಲೇಮಾರ್.ಜೆ(ಸುರತ್ಕಲ್) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಗೋಮಾಳಗಳನ್ನು ಸಂರಕ್ಷಿಸುವ ಮತ್ತು ಅಭಿವೃದ್ಧಿ ಪಡಿಸಿ ಪಶುಸಂಗೋಪನೆಗೆ ಅನುಕೂಲ ಮಾಡಿ ಕೊಡುವ ಕುರಿತು ಸರ್ಕಾರದ ನಿರ್ದಿಷ್ಟ ಕ್ರಮಗಳೇನು ?

ಆ) ಕೆ.ಎಂ.ಎಫ್ ಸಂಸ್ಥೆಗೆ ಈ ಉಸ್ತುವಾರಿಯನ್ನು ನಿಯಮಾನುಸಾರ ವಹಿಸಿಕೊಟ್ಟು ಅಭಿವೃದ್ಧಿ ಪಡಿಸುವ ಕುರಿತು ಸರ್ಕಾರ ಪರಿಶೀಲಿಸುವುದಕ್ಕೆ ಮುಂದಾಗುವುದೇ ?

ಇ) ಗೋಮಾಳಗಳನ್ನು ಸಂರಕ್ಷಿಸಿ ಅಲ್ಲಿ ಜಾನುವಾರುಗಳಿಗೆ ನೀರು, ಹುಲ್ಲು ಮುಂತಾಗಿ ಒದಗಿಸಿ ಹೈನುಗಾರಿಕೆ ಅಭಿವೃದ್ಧಿ ಪಡಿಸಲು ಸರ್ಕಾರ ಕ್ರಮ ಜರುಗಿಸುವುದೇ ?

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) :

ಅ) ಕರ್ನಾಟಕ ಭೂ ಕಂದಾಯ ನಿಯಮಾವಳಿ 1966ರ ನಿಯಮ 97ರ ಅನ್ವಯ ಪ್ರತಿ ಗ್ರಾಮದಲ್ಲಿ 100 ಜಾನುವಾರುಗಳ ಮಂದೆಗೆ 12 ಹೆಕ್ಟೇರ್ ಜಮೀನನ್ನು (ಮುಫತ್ ಹುಲ್ಲುಗಾವಲು) ಜಾನುವಾರುಗಳು ಮೇಯುವುದಕ್ಕೆ ಕಾಯ್ದಿರಿಸಲು, ಒಂದು ವೇಳೆ ಗ್ರಾಮಕ್ಕೆ ಗೋಮಾಳ ಜಮೀನು ಇಲ್ಲದೇ ಇದ್ದಲ್ಲಿ ಪಕ್ಕದ ಗ್ರಾಮದ ಜಮೀನಿನಲ್ಲಿ ಸರ್ಕಾರಿ ಜಮೀನನ್ನು ಗೋಮಾಳ ಉದ್ದೇಶಕ್ಕಾಗಿ ಕಾಯ್ದಿರಿಸಲು ಅವಕಾಶ ಕಲ್ಪಿಷಲಾಗಿದೆ. ಯಾವುದೇ ಗ್ರಾಮದಲ್ಲಿ ಗೋಮಾಳ ಜಮೀನಿನ ವಿಸ್ತೀರ್ಣ ನಿಗಧಿ ಪಡಿಸಲು ಜಿಲ್ಲಾಧಿಕಾರಿಯವರಿಗೆ ಅಧಿಕಾರ ನೀಡಲಾಗಿದೆ. ಜಿಲ್ಲಾಧಿಕಾರಿಗಳ ಅಭಿಪ್ರಾಯದಂತೆ ಸದರಿ ಗೋಮಾಳ ಜಮೀನಿನ ಮಿತಿಗಿಂತ ಹೆಚ್ಚಿಗೆ ಅವಶ್ಯಕತೆ ಇದ್ದಲ್ಲಿ ಅಷ್ಟು ಜಮೀನನ್ನು ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸಲು ಅವಕಾಶ ಕಲ್ಪಿಸಲಾಗಿದೆ. ಒಂದು ವೇಳೆ ಕಾಯ್ದಿರಿಸಿದ ಗೋಮಾಳ ಜಮೀನಿನ ವಿಸ್ತೀರ್ಣ ಜಾಸ್ತಿ ಎಂದು ಪರಿಗಣಿಸಿದಲ್ಲಿ ಅಷ್ಟು ಜಮೀನನ್ನು ಗೋಮಾಳ ಶೀರ್ಷಿಕೆಯಿಂದ ತಗ್ಗಿಸಲು ಅವಕಾಶ ಕಲ್ಪಿಸಲಾಗಿದೆ. ಗೋಮಾಳ ಜಮೀನಿನ ಕಾಯ್ದಿರಿಸುವಿಕೆಯ ಮಿತಿಗಿಂತ ಜಮೀನಿನ ವಿಸ್ತೀರ್ಣ ಕಡಿಮೆ ಮಾಡುವುದಾದಲ್ಲಿ ಜಿಲ್ಲಾಧಿಕಾರಿಗಳು ಸರ್ಕಾರದ ಪೂರ್ವಾನುಮೋದನೆ ಪಡೆಯಬೇಕೆಂದು ಅವಕಾಶ ಕಲ್ಪಿಸಲಾಗಿದೆ. ಆದರೆ ಇ ಕೆಳಕಂಡ ಉದ್ದೇಶಗಳಿಗೆ ಗೋಮಾಳ ಜಮೀನಿನ ವಿಸ್ತೀರ್ಣ ಕಡಿಮೆ ಮಾಡಲು ಜಿಲ್ಲಾಧಿಕಾರಿಗಳಿಗೆ ಅವಕಾಶ ಕಲ್ಪಿಸಲಾಗಿದೆ.

1) ನಿವೇಶನ ರಹಿತರಿಗೆ ನಿವೇಶನ ಹಂಚುವ ಉದ್ದೇಶಕ್ಕಾಗಿ.

2) ಗ್ರಾಮವಾಸಿಗಳಾದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರಿಗೆ ಕೃಷಿ ಉದ್ದೇಶಕ್ಕಾಗಿ ಜಮೀನನ್ನು ಹಂಚಲು

3) ಭೂ ಕಂದಾಯ ಕಾಯಿದೆಯ Chapter-XIII-A ಅಡಿ ಅನಧಿಕೃತ ಒತ್ತುವರಿಯಲ್ಲಿನ ಕೃಷಿ ಜಮೀನನ್ನು ಸಕ್ರಮೀಕರಣಗೊಳಿಸುವ ಉದ್ದೇಶಕ್ಕಾಗಿ.

ಅದು ಅಲ್ಲದೇ ಗೋಮಾಳ ಜಮೀನನ್ನು ಒಳಗೊಂಡಂತೆ ಸರ್ಕಾರಿ ಜಮೀನುಗಳ ಬೇಡಿಕೆಗೆ ಅನೇಕ ಸಂಸ್ಥೆಗಳಿಂದ ಕೋರಿಕೆ ಬರುತ್ತಿರುವ ಕಾರಣ ಮತ್ತು ಸರ್ಕಾರಿ ಜಮೀನಿನ ವಿರಳತೆಯನ್ನು ಗಮನದಲ್ಲಿಟ್ಟುಕೊಂಡು ಭೂ ಕಂದಾಯ ನಿಯಮಾವಳಿ ಮತ್ತು ಭೂ ಮಂಜೂರಾತಿಯನ್ನು ನಿಯಂತ್ರಿಸಲು ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗೆ ಸಮಗ್ರ ತಿದ್ದುಪಡಿ ತರುವ ಬಗ್ಗೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) ಗೋವಾಳ ಜಮೀನಿನ ಉಸ್ತವಾರಿಯನ್ನು ಕೆ.ಎಂ.ಎಫ್. ಸಂಸ್ಥೆಗೆ ವಹಿಸಿ ಅಭಿವೃದ್ದಿಪಡಿಸುವ ಬಗ್ಗೆ ಯಾವುದೇ ಪ್ರಸ್ತಾವನೆ ಪಶುಸಂಗೋಪನಾ ಇಲಾಖೆಯಿಂದ ಬಂದಿರುವುದಿಲ್ಲ.

ಇ) "ಅ" ಮತ್ತು "ಆ" ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

758(815) ಶ್ರೀ ಕೃಷ್ಣ ಪಾಲೇಮಾರ್. ಜೆ(ಸುರತ್ಕಲ್) : ಮಾನ್ಯ ಪ್ರವಾಸೋದ್ಯಮ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಗುರುತಿಸಲ್ಪಟ್ಟ ಕಡಲ ತೀರಗಳ ಸಂಖ್ಯೆ ಎಷ್ಟು ;

ಆ) ಅನ್ವೇಷಣೆಗೆ ಒಳಪಡದ ಕಡಲ ತೀರಗಳು ಇನ್ನೂ ಉಳಿದಿವೆಯೇ ;

ಇ) ಕಡಲ ತೀರಗಳಿಗೆ ಮೂಲಭೂತ ಸಂಪರ್ಕ ರಸ್ತೆಗಳ ಸೌಲಭ್ಯಗಳನ್ನು ಒದಗಿಸಲು ಸರ್ಕಾರದ ಕಾರ್ಯ ಯೋಜನೆಗಳೇನು ;

ಈ) ಕಡಲ ತೀರಗಳ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ನಿಗಧಿಪಡಿಸಲಾದ ಮೊತ್ತ ಎಷ್ಟು:

ಶ್ರೀ ಡಿ.ಟಿ. ಜಯಕುಮಾರ್ (ಪ್ರವಾಸೋದ್ಯಮ ಸಚಿವರು):

ಅ) ಒಂಭತ್ತು(9)

ಆ) ಹೌದು

ಇ) ಪ್ರವಾಸಿ ಸ್ಥಳಗಳಲ್ಲಿ ಹೋಗುವ ಸಂಪರ್ಕ ರಸ್ತೆಗಳನ್ನು ಹುಡ್ಕೋ ಮೂಲಕ ಅಭಿವೃದ್ದಿ ಪಡಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಈ) ರೂ.25.00 ಲಕ್ಷ(ರೂಪಾಯಿ ಇಪ್ಪತ್ತೈದು ಲಕ್ಷಗಳು ಮಾತ್ರ)

760(1336) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನಾದ್ಯಂತ ಪರಿವರ್ತಕಗಳನ್ನು (ಟಿ.ಸಿ) ಹೆಚ್ಚುವರಿಯಾಗಿ ಅಳವಡಿಸಲು 1998 ರಲ್ಲಿ ಕಾರ್ಯಾದೇಶವಾಗಿದ್ದರೂ ಇಲ್ಲಿಯವರೆಗೆ ಕೇವಲ ಅರ್ಧದಷ್ಟು ಸಾಮಗ್ರಿಗಳನ್ನು ಮಾತ್ರ ಬಿಡುಗಡೆಗೊಳಿಸಿ, ಈಗ ಕಾಮಗಾರಿ ಪೂರ್ಣಗೊಳ್ಳುವ ಮೊದಲೇ ಬಾಕಿ ಸಾಮಗ್ರಿಗಳಿಗೆ ಬಜೆಟ್ ಕೇಳುತ್ತಿರುವುದು ಏಕೆ;

ಆ) ಸದರಿ ಸಾಮಗ್ರಿಗಳನ್ನು ಯಾವಾಗ ಬಿಡುಗಡೆಗೊಳಿಸಲಾಗುವುದು ಮತ್ತು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು ?

ಶ್ರೀ ಹೆಚ್.ಡಿ.ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ಬರುವ ಚಿಕ್ಕಮಗಳೂರು ಜಿಲ್ಲೆತರೀಕೆರೆ ತಾಲ್ಲೂಕಿನಾದ್ಯಾಂತ ಹೆಚ್ಚುವರಿ ಪರಿವರ್ತಕಗಳನ್ನು (ಟಿ.ಸಿ) ಅಳವಡಿಸಲು 1998 ರಲ್ಲಿ ಕಾಯಾದೇಶವಾದ ಎಲ್ಲಾ ಕಾಮಗಾರಿಗಳು ಮುಕ್ತಾಯವಾಗಿರುತ್ತವೆ. ನಂತರದ ವರ್ಷಗಳಲ್ಲಿ ಮಂಜೂರಾದ ಕೆಲವು ಕಾಮಗಾರಿಗಳು ಪ್ರಗತಿಯಲ್ಲಿವೆ. ಅವುಗಳನ್ನು ಪೂರ್ಣಗೊಳಿಸಲು ಅಗತ್ಯ ಸಾಮಗ್ರಿಗಳ ಅವಶ್ಯಕತೆ ಇದೆ.